ಸಾಕ್ಷಿಯ ಹೆಸರುಃ ಪ್ರಕಾಶ್ ಎಂ.ಕೆ.

ದಿನಾಂಕಃ **12-04-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ ಎ.ಪಿ.ಪಿ. ವಕೀಲರಿಂದಃ**

ನಾನು ಖಾಯಂ ಆಗಿ ಚೆನ್ನರಾಯಪಟ್ಟಣದ ಗಾಂಧಿ ವೃತ್ತದಲ್ಲಿ ವಾಸವಾಗಿದ್ದೇನೆ. ನಾನು ಸಕಲೇಶಪುರ ನ್ಯಾಯಾಲಯದಲ್ಲಿ ಬೇಲೀಫ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಚೆನ್ನರಾಯಪಟ್ಟಣದಲ್ಲಿ ಕಳೆದ 20 ವರ್ಷಗಳಿಂದ ವಾಸವಾಗಿದ್ದೇನೆ. ನಮ್ಮ ಮನೆಯ ಪಕ್ಕದಲ್ಲಿ ಸಾಯಿ ಮೆಡಿಕಲ್ ಸ್ಟೋರ್ಸ್ ಎಂಬ ಅಂಗಡಿಯನ್ನು ಸುರೇಶ್ ಎಂಬುವವರು ಇಟ್ಟುಕೊಂಡಿರುತ್ತಾರೆ ಎಂದರೆ ಸರಿ. ಅವರು ನಮ್ಮ ಮನೆಯ ಪಕ್ಕದಲ್ಲಿರುವುದರಿಂದ ತುಂಬಾ ಅನ್ಯೋನ್ಯವಾಗಿದ್ದೇವೆ ಎಂದರೆ ಸಾಕ್ಷಿ ಹಾಗೇನಿಲ್ಲ ಎನ್ನುತ್ತಾರೆ. ಸದರಿ ಸುರೇಶ್ ಪಿರ್ಯಾದುದಾರರ ಸ್ವಂತ ಸಹೋದರ ಎಂದರೆ ನನಗೆ ಗೊತ್ತಿಲ್ಲ.

2) ನಾನು ಪಿರ್ಯಾದುದಾರರು ಮತ್ತು ಸುರೇಶ್ ಸಾಕಷ್ಟು ಕಾರ್ಯಕ್ರಮಗಳಲ್ಲಿ ಭೇಟಿ ಮಾಡುವುದು ಹಾಗೂ ಮನೆಗೆ ಬಂದು ಹೋಗಿ ಮಾಡುತ್ತಿದ್ದೆವು ಎಂದರೆ ಸುಳ್ಳು. ನಾಗರತ್ನಮ್ಮರವರು ನಿಡಿ-09 ರಂತೆ ಪಿರ್ಯಾದುದಾರರ ವಿರುದ್ಧ ದಾವೆ ದಾಖಲಿಸಲು ನಾನೇ ಕಾರಣ ಎಂದರೆ ಸರಿಯಲ್ಲ. ಪಿರ್ಯಾದುದಾರರ ವಿರುದ್ಧ ದಾಖಲಾದ ಅಸಲು ದಾವೆಯ ಮಾಹಿತಿ ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿ ನಮ್ಮ ವಕೀಲರು ನೋಟೀಸಿನಲ್ಲಿ ಈ ಕುರಿತು ಬರವಣಿಗೆಯಾಗಿದ್ದರಿಂದ, ಅದರ ಬಗ್ಗೆ ಪರಿಶೀಲನೆ ಮಾಡಿದಾಗ, ಆನ್ ಲೈನ್ ನಲ್ಲಿ ಈ ಕುರಿತು ಮಾಹಿತಿ ಪಡೆದು ದಾಖಲೆಗಳನ್ನು

ಸಲ್ಲಿಸಿರುತ್ತೇವೆ ಎನ್ನುತ್ತಾರೆ. ಈ ಹಿಂದೆ ಪಿರ್ಯಾದುದಾರರ ವಿರುದ್ಧ ದಾಖಲಾದ ಅಸಲು ದಾವೆಯನ್ನು ನಡೆಸಲು, ವಕೀಲರನ್ನು ನೇಮಕ ಮಾಡಿಕೊಳ್ಳಲು ನಾನೇ ಸಂಪೂರ್ಣವಾಗಿ ಸಹಕಾರ ಮಾಡಿದ್ದೆ ಎಂದರೆ ಸುಳ್ಳು. ಚೆನ್ನರಾಯಪಟ್ಟಣದಲ್ಲಿರುವ ಪಿರ್ಯಾದುದಾರರ ತಂದೆಯ ಸ್ವತ್ತನ್ನು ವಿಭಾಗ ಮಾಡಿಕೊಳ್ಳಲು ನಾನೇ ಸಂಪೂರ್ಣವಾಗಿ ಪಿರ್ಯಾದುದಾರರಿಗೆ ಹಾಗೂ ಅವರ ಸಹೋದರರಿಗೆ ಸಹಾಯ ಮಾಡಿದ್ದೆ ಎಂದರೆ ಸುಳ್ಳು. ನಾನು ಪಿರ್ಯಾದುದಾರರ ಹಾಗೂ ಅವರ ತವರು ಮನೆಯ ಬಗ್ಗೆ ಸಂಪೂರ್ಣ ಮಾಹಿತಿ ಹೊಂದಿದ್ದರಿಂದ, ಅವರಿಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

3) ನಾನು ಪಿರ್ಯಾದುದಾರರ ನೋಟೀಸಿಗೆ ಪ್ರತ್ಯುತ್ತರವನ್ನು ನೀಡಿದ್ದು, ಅದರಲ್ಲಿ ಏನು ಬರವಣಿಗೆಯಾಗಿದೆ ಎಂದು ತಿಳಿದುಕೊಂಡಿರುತ್ತೇನೆ. ನನ್ನ ವಿರುದ್ಧ ಚೆನ್ನರಾಯಪಟ್ಟಣ ಮತ್ತು ಹಾಸನದ ನ್ಯಾಯಾಲಯಗಳಲ್ಲಿ ಸಾಕಷ್ಟು ಚೆಕ್ ಪ್ರಕರಣಗಳು ದಾಖಲಾಗಿವೆ ಎಂದರೆ ಸುಳ್ಳು. ನನ್ನ ಪ್ರತ್ಯುತ್ತರದಲ್ಲಿ ಮನೆಯನ್ನು ಬದಲಾವಣೆ ಮಾಡುವಾಗ ಚೆಕ್ ಕಾಣೆಯಾಗಿದೆ ಎಂದು ತಿಳಿಸಿರುತ್ತೇನೆ. ನನ್ನ ಚೆಕ್ ಕಳೆದು ಹೋದ ಬಗ್ಗೆ ಎರಡು ತಿಂಗಳ ನಂತರ ತಿಳಿದುಬಂದಿರುತ್ತದೆ. ನನ್ನ ಸಂಪೂರ್ಣ ಚೆಕ್ ಪುಸ್ತಕ ಕಳೆದುಹೋಗಿರುತ್ತದೆ. ನಾನು ಚೆಕ್ ಪುಸ್ತಕವನ್ನು ಸಹಿ ಮಾಡಿ ಇಟ್ಟಿರುವುದಿಲ್ಲ, ಹಾಗೇ ಖಾಲಿಯಾಗೆ ಇಟ್ಟಿದ್ದೆ. 2021ರ ಮಾರ್ಚ್-ಏಪ್ರಿಲ್ ನಲ್ಲಿ ನನ್ನ ಚೆಕ್‌ಗಳು ಕಾಣೆಯಾಗಿವೆ ಎಂದು ಗೊತ್ತಾಗಿರುತ್ತದೆ. ಆ ಚೆಕ್‌ಗಳು ಫೆಡರಲ್ ಬ್ಯಾಂಕಿಗೆ ಸಂಬಂಧಿಸಿದ್ದವು. ಆ ಚೆಕ್ ಪುಸ್ತಕದಲ್ಲಿ 7-8 ಹಾಳೆಗಳು ಇದ್ದವು. ಯಾವ ಯಾವ

ನಂಬರಿನ ಚೆಕ್‌ಗಳು ಕಳೆದು ಹೋಗಿದ್ದವು ಎಂದು ಹೇಳಲು ಬರುವುದಿಲ್ಲ. ನಾನು ಜವಾಬ್ದಾರಿಯುತ ನೌಕರ ಎಂದರೆ ಹೌದು. ನನಗೆ ಚೆಕ್ಕಿನ ಮೌಲ್ಯದ ಬಗ್ಗೆ ಗೊತ್ತು.

4) ನನ್ನ ಚೆಕ್‌ಗಳು ಕಾಣೆಯಾಗಿವೆ ಎಂದು ಗೊತ್ತಾದ ನಂತರ, ಬ್ಯಾಂಕ್ ಮತ್ತು ಪೋಲೀಸ್ ಠಾಣೆಗೆ ದೂರನ್ನು ಕೊಟ್ಟಿರುತ್ತೇನೆ. ಯಾವ ದಿನಾಂಕದಂದು ದೂರಿನ್ನು ಕೊಟ್ಟಿದ್ದೆ ಎಂದು ಮರೆತು ಹೋಗಿದೆ. ನಾನು ಚೆನ್ನರಾಯಪಟ್ಟಣ ಪೋಲೀಸ್ ಠಾಣೆಗೆ ದೂರನ್ನು ಕೊಟ್ಟಿದ್ದೆ. ನಾನು ಪೋಲೀಸರಿಗೆ ದೂರನ್ನು ಕೊಟ್ಟ ಬಗ್ಗೆ ನನ್ನ ಬಳಿ ಹಿಂಬರಹ ಇಲ್ಲ. ನಾನು ಮೇಲಾಧಿಕಾರಿಗೆ ಹಿಂಬಹರ ನೀಡಿದ ಬಗ್ಗೆ ದೂರನ್ನು ನೀಡಿರುವುದಿಲ್ಲ. ನನ್ನ ದೂರಿನ ಮೇಲೆ ಪೋಲೀಸರು ಕ್ರಯ ಕೈಗೊಳ್ಳದ ಕಾರಣ, ನಾನು ಯಾವುದೇ ರೀತಿಯ ಕಾನೂನು ಕ್ರಮ ಅವರ ವಿರುದ್ಧ ತೆಗೆದುಕೊಂಡಿರುವುದಿಲ್ಲ. ಒಂದು ಚೆಕ್ ಪುಸ್ತಕ ಕಳೆದು ಹೋದರೆ, ಈ ಕುರಿತು ಒಂದು ಪ್ರಮಾಣ ಪತ್ರವನ್ನು ಮಾಡಿಸಿ, ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿ, ಆ ಆಧಾರದ ಮೇಲೆ ಪ್ರ.ವ.ವರದಿಯನ್ನು ದಾಖಲಿಸಬೇಕು ಎಂಬ ಮಾಹಿತಿ ನನಗೆ ಇಲ್ಲ. ನಾನು ಈ ಕುರಿತು ಗೊತ್ತಿದ್ದರೂ ಸಹ, ಪಿರ್ಯಾದುದಾರರಿಗೆ ವಂಚನೆ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5) ಈ ಪ್ರಕರಣವನ್ನು ಹೊರತುಪಡಿಸಿ, ನಾನು ಬೇರೆ ನ್ಯಾಯಾಲಯಗಳಲ್ಲಿ ಖಾಸಗಿ ಪಿರ್ಯಾದನ್ನು ದಾಖಲಿಸಿರುವುದಿಲ್ಲ. ನನ್ನ ಚೆಕ್ ಪುಸ್ತಕ ಕಳೆದುಹೋಗಿದೆ ಎಂದು ಕ್ರಯ ಕೈಗೊಳ್ಳಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನಾನು ಮನೆ ಕಟ್ಟಿಸುತ್ತಿದ್ದೆ ಎನ್ನುತ್ತಾರೆ. ಸಾಕ್ಷಿಗೆ ಈಗ ನಿಪಿ-01 ನ್ನು ತೋರಿಸಿದಾಗ, ಅದರಲ್ಲಿರುವ ಖಾತೆ ನಂಬರು ನಿಮ್ಮದೇ ಎಂದು ಕೇಳಿದಾಗ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಅದರಲ್ಲಿರುವ

ಸಹಿಯನ್ನು ತೋರಿಸಿ ಇದು ನಿಮ್ಮ ಸಹಿ ಎಂದು ಕೇಳಿದಾಗ, ಸಾಕ್ಷಿ ಅಲ್ಲ ಎನ್ನುತ್ತಾರೆ. ನಾನು ಇಂಗ್ಲೀಷ್ ಭಾಷೆಯಲ್ಲಿ ಸಹಿ ಮಾಡುತ್ತೇನೆ. ನಿಪಿ-01ರಲ್ಲಿರುವ ಸಹಿ ನನ್ನದೇ ಆಗಿದ್ದರೂ ಸಹ, ಪಿರ್ಯಾದುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಸಹಿ ನನ್ನದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಆರೋಪಿ ಪರ ವಕೀಲರು ಸಲ್ಲಿಸಿದ ವಕಾಲತ್ತನ್ನು ತೋರಿಸಿದಾಗ, ಅದರಲ್ಲಿರುವ ಸಹಿ ತಮ್ಮದೇ ಎಂದು ಒಪ್ಪಿಕೊಂಡಿರುತ್ತಾರೆ. ನಿಪಿ-01 ಹಾಗೂ ಸದರಿ ವಕಾಲತ್ತಿನಲ್ಲಿರುವ ತಮ್ಮ ಸಹಿ ಎರಡೂ ಒಂದೇ ಆಗಿವೆ ಎಂದರೆ ಸರಿಯಲ್ಲ. ಸದರಿ ಸಹಿಗಳನ್ನು ಬರಹ ತಜ್ಞರಿಗೆ ಪರೀಕ್ಷೆ ಕಳುಹಿಸಿಕೊಟ್ಟು ರುಜುವಾತುಪಡಿಸಲು ನನಗೇನೂ ತೊಂದರೆ ಇಲ್ಲ.

6) ನನ್ನ ತಂದೆಯ ಹೆಸರು ಎಂ.ವಿ.ಕೃಷ್ಣಮೂರ್ತಿ. ನಾನು ಸುಮಾರು 40-50 ಲಕ್ಷ ಖರ್ಚು ಮಾಡಿ ಮನೆ ಕಟ್ಟಿರುತ್ತೇನೆ. ನನ್ನ ಹೆಂಡತಿ ಎಸ್.ಬಿ.ಐ. ಬ್ಯಾಂಕಿನಿಂದ ಸಾಲ ಪಡೆದು ಮನೆ ಕಟ್ಟಿಸಿರುತ್ತೇನೆ. ನನ್ನ ಹೆಂಡತಿ ಖಾಸಗಿ ಸಂಗೀತ ಶಿಕ್ಷಕಿಯಾಗಿದ್ದಾರೆ. ಮನೆಯಲ್ಲಿಯೇ ಪಾಠ ಮಾಡುತ್ತಾರೆ. ನನಗೆ ಒಬ್ಬಳು ಮಗಳಿದ್ದು, ಅವಳಿದ್ದು ಪಿ.ಹೆಚ್.ಡಿ. ಓದುತ್ತಿದ್ದಾಳೆ. ನನ್ನ ಮಗಳನ್ನು ಓದಿಸಲು ಸಾಕಷ್ಟು ಖರ್ಚು ಬರುತ್ತದೆ ಎಂದರೆ ಸಾಕ್ಷಿ ಅವಳೇ ದುಡಿಯುತ್ತಾಳೆ ಎನ್ನುತ್ತಾರೆ. ನಾನು ತಿಂಗಳಿಗೆ ರೂ.42,000/- ವೇತನ ಪಡೆಯುತ್ತೇನೆ. ನಾನು ಇಷ್ಟೊಂದು ದೊಡ್ಡ ಮೊತ್ತದ ಮನೆ ಕಟ್ಟಲು ಸಂಬಳದಿಂದ ಸಾಕಾಗುವುದಿಲ್ಲ, ಆದ್ದರಿಂದ ನಾನು ಹಲವಾರು ಜನರಿಂದ ಇದೇ ರೀತಿ ಸಾಲ ಪಡೆದು ಮೋಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದುದಾರರಿಂದ ರೂ.8,75,000/-ಗಳನ್ನು ಪಡೆದು ಚೆಕ್ಕನ್ನು ನೀಡಿದ್ದರೂ

ಸಹ, ಅವರಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.